(SRI B. K. PUTTARAMIYA)

(*b*) whether the Atchkat of Kanva and also of the other major and minor tanks are sfficient to feed sugarcane crops to the Mandy if established at Channapatna ;

(*c*) whether they would take up the question of locating a Sugar Mill at Channapatna ?

A.—**Sri C. M. POONACHA** (Minister for Home Affairs and Industries).—

(*a*) Yes.

(*b*) This has to be examined.

(*c*) Not at present.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಮದ್ದೂರಿನಿಂದ ಮಂಡ್ಯಾಕ್ಕೂ, ಚೆನ್ನಪಟ್ಟಣದಿಂದ ಮದ್ದೂರಿಗೂ ಇರುವ ದೂರವೆಷ್ಟು ?

ಶ್ರೀ ಸಿ. ಎಂ. ಪೂಣಚ್ಚ.—ನೋಟೀಸ್.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಮದ್ದೂರಿನಿಂದ ಮಂಡ್ಯ ಸಕ್ಕರೆ ಕಾರ್ಖಾನೆಗೆ ಕಬ್ಬನ್ನು ಸಾಗಿಸುತ್ತಾ ಇರುವುದರಿಂದ, ಮದ್ದೂರಿನ ರೈತರಿಗೆ ಮಂಡ್ಯ ಸಕ್ಕರೆ ಕಾರ್ಖಾನೆಯಿಂದ ಅನುಕೂಲಗಳು ಸಿಕ್ಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಸಿ. ಎಂ. ಪೂಣಚ್ಚ,—ಕೆಲವೊಂದು ಒಪ್ಪಿಗೆಯ ಮೇಲೆ ದರಖಾಸ್ತು ಜಮೀನಿನಲ್ಲಿ ಬೆಳೆಯುವ ಕಬ್ಬನ್ನು ಮಂಡ್ಯಾ ಸಕ್ಕರೆ ಕಾರ್ಖಾನೆಗೆ ಕೊಡುತ್ತಿದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಚನ್ನಪಟ್ಟಣದಿಂದ ಮಂಡ್ಯ ಸಕ್ಕರೆ ಕಾರ್ಖಾನೆಗೆ ಕಬ್ಬನ್ನು ಸಾಗಿಸುವುದಕ್ಕೆ ಬಹಳ ದೂರವಾಗುತ್ತದೆಯಲ್ಲವೇ ?

ಶ್ರೀ ಸಿ. ಎಂ. ಪೂಣಚ್ಚ.—ಆ ವಿಷಯ ನನ್ನ ತಿಳಿವಳಿಕೆಯಲ್ಲಲ್ಲ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಚನ್ನಪಟ್ಟಣ, ಮಂಡ್ಯ ಸಕ್ಕರೆ ಕಾರ್ಖಾನೆಗೆ ದೂರವಾಗಿದ್ದರೆ ಮದ್ದೂರಿಗಿಂತ ಚನ್ನಪಟ್ಟಣದಲ್ಲಿ ಸಕ್ಕರೆ ಕಾರ್ಖಾನೆ ಸ್ಥಾಪಿಸುವ ಅವಶ್ಯಕತೆ ಹೆಚ್ಚಲ್ಲವೆ ?

ಶ್ರೀ ಸಿ. ಎಂ. ಪೂಣಚ್ಚ.—ಕೇವಲ ದೂರ ಎಂಬ ಒಂದೆ ದೃಷ್ಟಿಯನ್ನೇ ಇಟ್ಟುಕೊಂಡು ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪನೆಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಕಣ್ವ ಹಾಗೂ ಇತರ ದೊಡ್ಡ ಮತ್ತು ಚಿಕ್ಕ ಕೆರೆಗಳ ಅಚ್ಚುಕಟ್ಟುಗಳು ಸಾಕಷ್ಟಿರುವುದರಿಂದ, ಮೂರು ಸಾವಿರ, ನಾಲ್ಕು ಸಾವಿರ ಎಕರೆಗಿಂತ ಹೆಚ್ಚಿಗೆ ಕಬ್ಬನ್ನು ಬೆಳೆಯುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಸಿ. ಎಂ. ಪೂಣಚ್ಚ.—ಒಂದು ಸಕ್ಕರೆ ಕಾರ್ಖಾನೆಯನ್ನು ಸರಿಯಾದ ರೀತಿಯಲ್ಲಿ ಸ್ಥಾಪಿಸ ಬೇಕಾದರೆ ಕಬ್ಬಿನ ಬೆಳೆ ಬೆಳೆಸುವುದಕ್ಕೆ ಇರುವಂತಹ ಅನುಕೂಲತೆ ಚನ್ನಪಟ್ಟಣ ಪ್ರದೇಶದಲ್ಲಿ ಸದ್ಯಕ್ಕಿಲ್ಲ ವೆಂಬುದು ಸರ್ಕಾರಕ್ಕೆ ಮನವರಿಕೆಯಾಗಿದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಮದ್ದೂರಿಗಿಂತ ಚನ್ನಪಟ್ಟಣದಲ್ಲಿ ಟ್ರಾನ್ಸ್‌ಪೋರ್ಟ್ ಅನುಕೂಲತೆಗಳು ಚೆನ್ನಾಗಿವೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಮಾನ್ಯ ಸದಸ್ಯರ ಅಭಿಪ್ರಾಯ ಆ ರೀತಿ ಇರಬಹುದು. ರೈತರ ಅಭಿಪ್ರಾಯ ಏನಿದೆಯೋ ನನಗೆ ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಮದ್ದೂರಿಗಿಂತ ಚನ್ನಪಟ್ಟಣದಲ್ಲಿ ಅನುಕೂಲಗಳು ಜಾಸ್ತಿ ಇವೆಯೆಂದು ಪರೀಕ್ಷೆಮಾಡಿ ಗೊತ್ತಾದಮೇಲೆ, ಚನ್ನಪಟ್ಟಣದಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆಮಾಡುವುದಕ್ಕಾಗುತ್ತದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಆ ವಿಷಯವನ್ನು ಆಲೋಚನೆ ಮಾಡಬಹುದು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಮದ್ದೂರು ಸುತ್ತಮುತ್ತಲೂ ಕಬ್ಬನ್ನು ಬೆಳೆಯುವುದಕ್ಕೆ ಸಾಕಷ್ಟು ಅನುಕೂಲವಿಲ್ಲದೆ ತೊಂದರೆಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಕೆಲವು ತೊಂದರೆಗಳಿವೆ ಯೆಂದು ಸರ್ಕಾರದ ದೃಷ್ಟಿಗೆ ಬಂದಿಲ್ಲ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಮದ್ದೂರಿನಲ್ಲಿ ಪ್ರತ್ಯೇಕವಾಗಿ ಸಕ್ಕರೆ ಕಾರ್ಖಾನೆ ತೆರೆಯುವುದರಿಂದ, ಮಂಡ್ಯ, ಮಳವಳ್ಳಿ ಮತ್ತು ಇತರ ಕೆಲವು ತಾಲ್ಲೂಕು ಗಳಿಗೆ ಮದ್ದೂರು ತಾಲ್ಲೂಕು ಮಧ್ಯರಾಷ್ಟ್ರವಾಗುವುದಿಲ್ಲವೇ ?

ಶ್ರೀ ಸಿ. ಎಂ. ಪೂಣಚ್ಚ.—ಒಂದು ದೃಷ್ಟಿಯಿಂದ ಆಲೋಚನೆಮಾಡಿದರೆ, ತಮ್ಮ ಅಭಿಪ್ರಾಯ ಸರಿ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಹಾಗಾದರೆ ಸಣ್ಣಪುಟ್ಟ ಕೆರೆಗಳ ಆಧಾರ ಮತ್ತು ಭಾರೀ ಅಣೆಕಟ್ಟುಗಳ ಅನುಕೂಲಗಳಿವೆ ಎಂಬುದು ಸರ್ಕಾರಕ್ಕೆ ಮನವರಿಕೆಯಾದರೆ, ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸುವುದಕ್ಕಾಗುತ್ತದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಎರಡು ಅನುಕೂಲಗಳನ್ನನುಸರಿಸಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡುವುದರಿಂದ ಏನೂ ತೊಂದರೆಯಿಲ್ಲ.

Sri A. R. BADRI NARAYAN.—Is the question of starting a sugar factory at Channapatna feasible Sir ?

Sri C. M. POONACHA.—With the data available at present, it is found not feasible.

Veterinary hospitals and their establishments in the State.

Q.—602. **Sri H. V. KOUJALGI** (Sampagaon I).—

Will the Government be pleased to state :—

(*a*) the number of veterinary hospitals in the New Mysore State ;

(*b*) the number of Veterinary Surgeons, Assistant Surgeons and Stockmen in the State ?

A.—Sri H. S. RUDRAPPA (Minister for Agriculture).—

(*a*) Veterinary Hospitals	...	22
Veterinary Dispensaries	...	151
Rural Veterinary Dispensaries	...	195
		368
(*b*) Veterinary Surgeons	...	240
Assistant Surgeons	...	...
Stockmen	...	436

Sri H. V. KOUJALGI.—Is it possible to state the number of dispensaries in Bombay Karnatak?

Sri H. S. RUDRAPPA.—I am sorry Sir, I have no report.

Sri N. O. SAMAJI.—(In Marathi) How many veterinary hospitals are there in rural parts of Belgaum District?

ಶ್ರೀ ಎಚ್. ಎಸ್. ರುದ್ರಪ್ಪ.—ಹಳ್ಳಿ ಪ್ರದೇಶದಲ್ಲಿ ಎಷ್ಟು ಆಸ್ಪತ್ರೆಗಳಿವೆಯೆಂಬ ವಿಚಾರ ಗೊತ್ತಿಲ್ಲ.

Sri N. O. SAMAJI.—(In Marathi) Is it a fact that medical aid is not extended to the rural parts in spite of the demand for the same from the people?

ಅಧ್ಯಕ್ಷರು.—ದವಾಖಾನೆಗಳಿಗೆ ಡಾಕ್ಟರುಗಳು ವೇಳೆಗೆ ಸರಿಯಾಗಿ ಹೋಗುತ್ತಿಲ್ಲವೆಂಬ ವಿಚಾರ ಸರ್ಕಾರದವರಿಗೆ ಗೊತ್ತಿದೆಯೇ ಎಂದು ಕೇಳುತ್ತಿದ್ದಾರೆ.

ಶ್ರೀ ಎಚ್. ಎಸ್. ರುದ್ರಪ್ಪ.—ಆ ವಿಚಾರ ನನಗೆ ಗೊತ್ತಿಲ್ಲ.

Sri L. B. BIRJE.—(In Marathi) Is it a fact that people of Pilangaum had made requests for medical aid, but the Doctor did not come to the village?

Mr. SPEAKER.—This question is with reference to a particular village. Such a question cannot be asked when the question is regarding the whole District.

Sri L. B. BIRJE.—(In Marathi) Is Government aware that nearly two thousand cattle were affected by the disease called Anthras, at Supa but the Doctor did not go to that village inspite of hundreds of wires sent by the people?

Mr. SPEAKER.—It is outside the scope of the question.

Sri L. B. BIRJE.—(In Marathi) Is it a fact that the veterinary dispensaries in Belgaum and Dharwar areas are quite insufficient?

Sri H. S. RUDRAPPA.—In another connection, I have brought to the notice of the House that veterinary dispensaries in Bombay area are very few. We have got the institutions only in Taluka areas.

Sri K. P. GADAG.—May I know whether the existing number of Veterinary surgeons could cope with the work of the dispensaries?

Sri H. S. RUDRAPPA.—Yes.

Sri ANNA RAO GANAMUKHI.—May I know whether Government is aware that in taluk-headquarters where there are no hospitals, the Veterinary surgeons are also giving medicine to the people? (*Laughter*)

Sri H. S. RUDRAPPA.—I am not aware, Sir.

ಶ್ರೀ ಎಂ. ಎಂ. ಪಾಟೀಲ್.—ಬಳ್ಳಾರಿ ಜಿಲ್ಲೆಯಲ್ಲಿ ಎಷ್ಟು ವೆಟರಿನೆರಿ ಆಸ್ಪತ್ರೆಗಳಿವೆ?

Sri H. S. RUDRAPPA.—Notice.

ಶ್ರೀ ಜಿ. ವೆಂಕಟೇಗೌಡ.—ಕೊಳ್ಳೇಗಾಲ ತಾಲ್ಲೂಕಿನಲ್ಲಿ ಒಂದು ಲಕ್ಷ 25 ಸಾವಿರ ಜಾನುವಾರುಗಳಿದ್ದಾಗ್ಗೂ ಅಲ್ಲಿ ಕೇವಲ ಒಂದೇ ಆಸ್ಪತ್ರೆಯಿರುವುದರಿಂದ ಅದು ಏತಕ್ಕೂ ಸಾಲದೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಸ್. ರುದ್ರಪ್ಪ.—ಆ ವಿಚಾರಗಳೆಲ್ಲವೂ ನಮ್ಮ ಗಮನಕ್ಕೆ ಬಂದಿದೆ. ಅಲ್ಲಿ ಆದಷ್ಟು ಬೇಗ ಇನ್ನೊಂದು ಆಸ್ಪತ್ರೆಯನ್ನು ತೆರೆಯಬೇಕೆಂಬ ಆಲೋಚನೆ ಸರ್ಕಾರದವರಿಗೆ ಇದೆ.

Sri H. V. KOUJALGI.—What steps have Government taken to increase the number of veterinary surgeons to cope with the work?

Sri H. S. RUDRAPPA.—I can understand the implication of the question. We intend to start a college this year.

ಶ್ರೀ ಟಿ. ಕೆ. ಕಂಬಳಿ.—ಎಲ್ಲ ತಾಲ್ಲೂಕ್ ಹೆಡ್ ಕ್ವಾರ್ಟರುಗಳಲ್ಲೂ ಒಂದೊಂದು ವೆಟರಿನೆರಿ ಡಿಸ್ಪೆನ್ಸರಿ ಇರುತ್ತದೆಯೇ?

ಶ್ರೀ ಎಚ್. ಎಸ್. ರುದ್ರಪ್ಪ.—ಬೊಂಬಾಯಿ ಪ್ರದೇಶದಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ಆಸ್ಪತ್ರೆಯಿದೆ.

ಶ್ರೀ ಟಿ. ಕೆ. ಕಂಬಳಿ.—ಮಹಲುಗಳಲ್ಲೊ?

ಶ್ರೀ ಎಚ್. ಎಸ್. ರುದ್ರಪ್ಪ.—ಹೋಬಳಿಗಳಲ್ಲಿಲ್ಲ.

ಶ್ರೀ ಜಿ. ಶಿವಪ್ಪ.—ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಹೊಸದಾಗಿ ಎಷ್ಟು ಜಾನುವಾರು ಆಸ್ಪತ್ರೆಗಳನ್ನು ಸ್ಥಾಪಿಸಬೇಕೆಂದಿದ್ದೀರಿ?

ಶ್ರೀ ಎಚ್. ಎಸ್. ರುದ್ರಪ್ಪ.—ಇಷ್ಟೇ ಎಂದು ಈಗ ಹೇಳುವುದಕ್ಕಾಗುವುದಿಲ್ಲ. ಈ ಬಾಬಿಗೆ ಎಷ್ಟು ಹಣದ ಸೌಲಭ್ಯ ಒದಗುತ್ತದೆಯೊ ಅಷ್ಟನ್ನೂ ಇದಕ್ಕೆ ಉಪಯೋಗಿಸಲಾಗುತ್ತದೆ.

ಶ್ರೀ ಜಿ. ಶಿವಪ್ಪ.—ಎಷ್ಟು ಜಾನುವಾರುಗಳಿಗೊಂದು ಆಸ್ಪತ್ರೆ ಇರಬೇಕೆಂಬ ನಿಯಮವುಏದೆ?

ಶ್ರೀ ಎಚ್. ಎನ್. ರುದ್ರಪ್ಪ.—ರಾಯಲ್ ಕಮಿಷನ್‌ನವರ ವರದಿ ಪ್ರಕಾರ 25 ಸಾವಿರ ಜಾನುವಾರುಗಳಿಗೊಂದು ಆಸ್ಪತ್ರೆಯಿರಬೇಕೆಂಬ ನಿಯಮವಿದೆ.

Sri G. SIVAPPA.—May I know if we have reached that stage of having one dispensary to the number of cattle recommended by the Royal Commission ?

Sri H. S. RUDRAPPA.—In Mysore, for an average cattle strength of 26,000, we have one dispensary.

ಶ್ರೀ ಎಸ್. ಬಿ. ಪದಕಿ.—ಈ ಜಾನುವಾರು ಆಸ್ಪತ್ರೆಗಳಲ್ಲಿ ಕೃತ್ರಿಮ ಜನನ ಮಾಡಿಸತಕ್ಕ ಆಸ್ಪತ್ರೆಗಳಿಷ್ಟಿರುತ್ತವೆ ?

ಅಧ್ಯಕ್ಷರು.—ಆ ಉಪಪ್ರಶ್ನೆ ಇದರಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಎಸ್. ಬಿ. ಪದಕಿ.—ಕೋಳಿ ಫಾರಂಗಳಿಷ್ಟಿವೆ ?

ಅಧ್ಯಕ್ಷರು.—ಆ ಉಪಪ್ರಶ್ನೆಯೂ ಕೂಡ ಉದ್ಭವಿಸುವುದಿಲ್ಲ.

ಶ್ರೀ ವಿ. ಕುಮಾರನಾಯಕ್.—ಸ್ಪಾಕ್‌ಮೆಕ್ಟ್ರೈನಿಂಗ್ ಕೊಡತಕ್ಕ ಶಾಲೆಗಳಿಷ್ಟಿವೆ ?

ಶ್ರೀ ಎಚ್. ಎನ್. ರುದ್ರಪ್ಪ.—ಧಾರವಾಡದಲ್ಲಿ ಒಂದಿದೆ.

ಶ್ರೀ ವಿ. ಕುಮಾರನಾಯಕ್.—ಅಲ್ಲಿ ಅಭ್ಯಾಸ ಮಾಡಲು ಎಷ್ಟು ಜನ ವಿದ್ಯಾರ್ಥಿಗಳಿಗೆ ಅವಕಾಶವಿದೆ ?

ಶ್ರೀ ಎಚ್. ಎನ್. ರುದ್ರಪ್ಪ.—30 ಜನ ವಿದ್ಯಾರ್ಥಿಗಳಿಗೆ ಅವಕಾಶವಿದೆ.

Sri A. R. BADRI NARAYAN.—To a question about the number of Assistant Surgeons, it is mentioned 'nil'. Are there no Assistant Surgeons, Sir ?

Sri H. S. RUDRAPPA.—The implication of the answer is that there is no cadre as such of the assistant surgeon. In Bombay area these surgeons are called as Veterinary Officers; here we call them as Veterinary Inspectors; it varies from place to place. So, there is no officer designated as assistant surgeon.

Sri ANNARAO GANAMUKHI.—May I know whether Government have any proposal to provide for mobile dispensaries in view of the difficulty that the villagers would not be able to go with their diseased cattle to the headquarters where these veterinary dispensaries are located ?

Sri H. S. RUDRAPPA.—There is no proposal.

ಶ್ರೀ ಯು. ಎಂ. ಮಾದಪ್ಪ.—ತಾವು ಆಗಲೇ ಕೊಟ್ಟ ಉತ್ತರದ ಪ್ರಕಾರ 25 ಸಾವಿರ ಜಾನುವಾರುಗಳಿಗೊಂದು ಆಸ್ಪತ್ರೆಯಿದ್ದರೆ ಸಾಕಾಗುವುದಿಲ್ಲವೆಂಬ ಅಂಶ ಸರ್ಕಾರದವರ ಅವಗಾಹನೆಗೆ ಬಂದಿದೆಯೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಮೈನೂರಿನಲ್ಲಿ ಸುಮಾರು 15 ಸಾವಿರಕ್ಕಿಂತಲೂ ಕಡಮೆ ಸಂಖ್ಯೆ ಜಾನುವಾರುಗಳಿಗೊಂದರಂತೆ ಆಸ್ಪತ್ರೆಇದೆಯಲ್ಲಾ ?

Sri U. M. MADAPPA.—If you take the State as a whole, you have reached the target; if you take a taluk as a unit, you have not reached that point. How can you say you have reached the point ?

Sri H. S. RUDRAPPA.—There is no particular reference to any taluk; I cannot follow the question.

Sri U. M. MADAPPA.—Is it not a fact that you have mentioned that you would give two more dispensaries in Chamarajanagar taluk ? Will you consider the matter ?

Sri H. S. RUDRAPPA.—I will consider.

ಶ್ರೀ ಬಿ. ಜೆ. ಖೋತ್.—ರೂರಲ್ ಏರಿಯಾದೊಳಗೆ ಹೆಚ್ಚು ಆಸ್ಪತ್ರೆಗಳನ್ನು ತೆರೆಯಲು ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ?

ಶ್ರೀ ಎಚ್. ಎನ್. ರುದ್ರಪ್ಪ.—ಈಗ ತಾಲ್ಲೂಕು ಗಳಲ್ಲೆಲ್ಲಾ ಇವೆ. ಇನ್ನು ಮೇಲೆಲ್ಲಾ ಗ್ರಾಮಾಂತರ ಪ್ರದೇಶಗಳ ಕಡೆ ನಮ್ಮ ಗಮನ ಹೋಗಬೇಕಾಗಿದೆ.

1-30 P.M.

ಶ್ರೀ ಎ. ಜೆ. ದೊಡ್ಡಮೇಟಿ.—ಉತ್ತರ ಕರ್ನಾಟಕದ ಪ್ರದೇಶದಲ್ಲಿ ಎಷ್ಟು ದನಗಳಿಗೆ ಒಂದು ಆಸ್ಪತ್ರೆ ಇದೆ ?

ಶ್ರೀ ಎಚ್. ಎಸ್. ರುದ್ರಪ್ಪ.—ಬಡ್ಜೆಟ್ ಚರ್ಚೆಯ ಕಾಲದಲ್ಲಿ ಜವಾಬು ಕೊಡುವಾಗ ಈ ವಿವರಗಳನ್ನು ನಾನು ಕೊಟ್ಟಿದ್ದೇನೆ. ಆ ಪ್ರದೇಶದಲ್ಲಿ ಸುಮಾರು 48,000 ದನಗಳಿಗೆ ಒಂದು ಆಸ್ಪತ್ರೆ ಇರುವಂತೆ ಕಾಣುತ್ತದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಗ್ರಾಮಾಂತರ ಪ್ರದೇಶಗಳಲ್ಲಿ 195 ದನಗಳ ಆಸ್ಪತ್ರೆಗಳು ಇವೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ಆದರೆ ಹೊನ್ನಳ್ಳಿ ಗ್ರಾಮದಲ್ಲಿ ಆಸ್ಪತ್ರೆ ಇಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಸ್. ರುದ್ರಪ್ಪ.—ನೋಟೀಸ್ ಬೇಕು.

ಶ್ರೀ ಡಿ. ಟಿ. ಸೀತಾರಾಮರಾವ್.—ಒಟ್ಟು 368 ದನಗಳ ಆಸ್ಪತ್ರೆಗಳು ಇವೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ಗ್ರಾಮಾಂತರ ಪ್ರದೇಶದಲ್ಲಿರುವ ಆಸ್ಪತ್ರೆಗಳಲ್ಲಿ ಸ್ಪಾಕ್‌ಮೆನ್ ಇಟ್ಟಿದ್ದೀರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ಕೆಲವು ಆಸ್ಪತ್ರೆಗಳಲ್ಲಿ ಇದ್ದಾರೆ.

ಶ್ರೀ ಆಲೂರು ಹನುಮಂತಪ್ಪ.—ಬೆಂಗಳೂರ ಸಿಟಿ ಆಸ್ಪತ್ರೆಯಲ್ಲಿ ಎಷ್ಟು ಸ್ಪಾಕ್‌ಮೆನ್ ಇದ್ದಾರೆ ?

ಶ್ರೀ ಎಚ್. ಎಸ್. ರುದ್ರಪ್ಪ.—ಕೆಲವೊಂದು ಆಸ್ಪತ್ರೆಯಲ್ಲಿ ಒಬ್ಬರಿಗಿಂತ ಜಾಸ್ತಿ ಇದ್ದಾರೆ. ಎಲ್ಲ ವಿವರವನ್ನೂ ಹೇಳುವುದಕ್ಕಾಗುವುದಿಲ್ಲ. ನೋಟೀಸ್ ಬೇಕು.

ಶ್ರೀ ಎಂ. ಎಂ. ಪಾಟೀಲ್.—ಎಲ್ಲಾ ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ಗಳಲ್ಲಿ ಆಸ್ಪತ್ರೆಗಳು ಇವೆ ಎಂದು ಹೇಳಿದ್ದೀರಿ. ಆದರೆ ಹಡಗಲಿಯಲ್ಲಿ ಆಸ್ಪತ್ರೆ ಇಲ್ಲದಿರುವ ದಕ್ಕೆ ಕಾರಣವೇನು ?

ಶ್ರೀ ಎಚ್. ಎಸ್. ರುದ್ರಪ್ಪ.—ನೋಟೀಸು ಬೇಕು.

ಶ್ರೀ ಎ. ಜೆ. ದೊಡ್ಡಮೇಟಿ.—ಉತ್ತರ ಕರ್ನಾಟಕದ ಪ್ರದೇಶದಲ್ಲಿ ಸುಮಾರು 48,000 ಧನಗಳಿಗೆ ಒಂದು ಆಸ್ಪತ್ರೆ ಇದೆ. ಮತ್ತು ಪ್ರತಿಯೊಂದು ತಾಲ್ಲೂಕಿಗೆ ಒಂದು ಆಸ್ಪತ್ರೆ ಇದೆ ಎಂದೂ ಸಹ ಹೇಳಿದ್ದೀರಿ. ಆದರೆ ಉತ್ತರ ಕರ್ನಾಟಕದಲ್ಲಿಯ ಒಂದೊಂದು ತಾಲ್ಲೂಕಿನ ಜನ ಸಂಖ್ಯೆಯು 80 ಸಾವಿರ ಇದೆ ಎಂಬುದು ತಮಗೆ ಗೊತ್ತಿದೆಯೇ ?

ಶ್ರೀ ಎಚ್. ಎಸ್. ರುದ್ರಪ್ಪ.— ನೋಟೀಸ್.

ಶ್ರೀ ಪಿ. ಜಿ. ಸಿದ್ಧಾಂತಿ.—ದೊಡ್ಡ ದೊಡ್ಡ ಹಳ್ಳಿಗಳಿಗೆ ಸ್ಯಾಕ್‌ಮೆನ್ ಪುರವಠೆಮಾಡಿ ಕೊಡುತ್ತೀರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ಈ ವರ್ಷ ಹಾಗೆ ಪ್ರಯತ್ನಮಾಡಬೇಕೆಂದು ಇದ್ದೇವೆ. ಎಲ್ಲೆಲ್ಲಿ ಸಾಧ್ಯ ವಿದೆಯೋ ಅಲ್ಲಲ್ಲಿ ಹಳ್ಳಿಗಳಿಗೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ರಾಮಯ್ಯ.—ಹಳ್ಳಿಗಳಿಗೆ ಆಸ್ಪತ್ರೆಗಳನ್ನು ಕೊಡುವಾಗ ಏನಾದರೂ ನಿಬಂಧನೆ ಹಾಕಿ ಕೊಡುತ್ತೀರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ನಿಬಂಧನೆ ಏನೂ ಇಲ್ಲ. ಕಟ್ಟಡವನ್ನು ಕಟ್ಟಿಸಿ ಕೊಟ್ಟರೆ ಮುಂದೆ ಅವರ ಕೋರಿಕೆಯನ್ನು ಈಡೇರಿಸುತ್ತೇವೆ.

ಶ್ರೀ ಎಂ. ಎಂ. ಪಾಟೀಲ್.— ಎರಡನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಎಲ್ಲೆಲ್ಲಿ ಆಸ್ಪತ್ರೆಗಳನ್ನು ಪ್ರಾರಂಭಿಸಬೇಕೆಂದು ಇಟ್ಟುಕೊಂಡಿದ್ದೀರಿ ?

ಶ್ರೀ ಎಚ್. ಎಸ್. ರುದ್ರಪ್ಪ.—ಇಂಥಲ್ಲಿಯೇ ಎಂದು ಇಲ್ಲ. ಆಸ್ಪತ್ರೆಯಾಗಬೇಕೆಂದು ಅರ್ಜಿಗಳು ಬಂದ ಸ್ಥಳಗಳಲ್ಲಿ ಮಾಡುತ್ತೇವೆ. ಆಸ್ಪತ್ರೆಯೂ ಬಹುದೂರ ಅಂತರದಲ್ಲಿ ಇದ್ದು ಜನಗಳಿಗೆ ತೊಂದರೆಯಾಗುತ್ತಿದ್ದರೆ ಅಂಥ ಸ್ಥಳವನ್ನು ನೋಡಿ ಆಸ್ಪತ್ರೆ ಕೊಡುತ್ತೇವೆ.

ಶ್ರೀ ಎಂ. ಎಂ. ಪಾಟೀಲ್.—ಬಿಲ್ಡಿಂಗ್ ಕಟ್ಟಿಸಿ ಕೊಡದಿದ್ದರೆ ಆಸ್ಪತ್ರೆ ಕೊಡುವುದಿಲ್ಲವೇ ?

ಅಧ್ಯಕ್ಷರು.—ಈ ಪ್ರಶ್ನೆ ಇಲ್ಲಿ ಉದ್ಭವಿಸುವದಿಲ್ಲ.

ಶ್ರೀ ಎಲ್. ಸಿದ್ದಪ್ಪ.—ಹಳ್ಳಿಗಳಲ್ಲಯ ಆಸ್ಪತ್ರೆಗಳಲ್ಲ ವೆಟೆರಿನರಿ ಡಾಕ್ಟರರು ಇರುವುದಿಲ್ಲ ; ಆದರೆ ಸ್ಯಾಕ್‌ಮೆಟ್ ಇರುತ್ತಾರೆ. ಇದು ತಮಗೆ ಗೊತ್ತಿದೆಯೇ?

ಶ್ರೀ ಎಚ್. ಎಸ್. ರುದ್ರಪ್ಪ.—ಸದ್ಯಕ್ಕೆ ವೆಟೆರಿನರಿ ಗ್ಯಾಜುಯೇಟ್ಸ್ ಇಲ್ಲ.

ಶ್ರೀ ಜಿ. ಬಿ. ಶಂಕರರಾವ್.—ನಂಚಾರಿ ಆಸ್ಪತ್ರೆಗಳನ್ನು ಇಡುವುದು ಯೋಗ್ಯವಾಗುವುದಿಲ್ಲವೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಈ ಬಗ್ಗೆ ಯೋಚನೆ ಮಾಡುತ್ತೇವೆ.

Looms to Government Silk-Filatures, Kanakapura.

Q.—671. Sri S. KARIAPPA (Virupakshipura).—

Will the Government be pleased to state :—

(*a*) whether there is an approved proposal to add sufficient number of looms to Government Silk Filature, Kanakapura ;

(*b*) whether the proposal has been implemented ;

(*c*) if not, the reasons therefor ?

A.—Sri C. M. POONACHA (Minister for Home Affairs and Industries).—

(*a*) The proposal is under consideration.

(*b*) and (*c*) Does not arise in view of answer to clause (*a*).

ಶ್ರೀ ಎಸ್. ಕರಿಯಪ್ಪ.—ಕನಕಪುರದಲ್ಲಿರುವ ಸರ್ಕಾರದ ರೇಷ್ಮೆ ಫಿರೇಚರ್ ಕಾರ್ಖಾನೆಗೆ ಇನ್ನೂ ಕೆಲವು ಮಗ್ಗಗಳನ್ನು ಸೇರಿಸಬೇಕೆಂದು ಯೋಚನೆ ಮಾಡಿದ್ದೀರಾ ?

ಶ್ರೀ ಸಿ. ಎಂ. ಪೂಣಚ್ಚ.—ಎಷ್ಟು ಇರಬೇಕು ಎಂಬುದನ್ನು ಯೋಚನೆ ಮಾಡಬೇಕಾಗಿದೆ.

ಶ್ರೀ ಎಸ್. ಕರಿಯಪ್ಪ.—ಈಗ ಇರತಕ್ಕಂಥ ಮಗ್ಗಗಳಿಗೆ ಇನ್ನೂ 50 ಮಗ್ಗಗಳನ್ನು ಸೇರಿಸಬೇಕೆಂದು ಯೋಚನೆ ಮಾಡಿದ್ದೀರಾ ?

ಶ್ರೀ ಸಿ. ಎಂ. ಪೂಣಚ್ಚ.—ಒಂದು ಯೋಜನೆಯು ಈ ಇಲಾಖೆಯವರ ಪರಿಶೀಲನೆಯಲ್ಲಿ ಇದೆ. ಇನ್ನೂ ಅವರ ಪರಿಶೀಲನೆ ಮುಗಿದಿಲ್ಲ.

ಶ್ರೀ ಎಸ್. ಕರಿಯಪ್ಪ.—ಕೇಂದ್ರ ಸರ್ಕಾರದಿಂದ ಸಹಾಯವನ್ನು ಕೋರಲಾಗಿದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಇನ್ನೂ ಇಲಾಖೆಯವರಿಂದ ಪರಿಶೀಲನೆಯಾಗಿ ಶಿಫಾರಸುಗಳು ಬಂದಿಲ್ಲ. ಅದು ಬಂದ ನಂತರ ಸರಕಾರ ಪರಿಶೀಲನೆಮಾಡಿ ಇಂಡಿಯಾ ಸರ್ಕಾರದವರಿಗೆ ಶಿಫಾರಸುಗಳನ್ನು ಕಳಿಸಿ ಕೊಡಲಾಗುವುದು.

ಶ್ರೀ ಎಂ. ಲಿಂಗೇಗೌಡ.—ಈಗ ಇರತಕ್ಕಂಥವುಗಳು ಕೈಮಗ್ಗಗಳಾಗಿವೆ. ಹೊಸದಾಗಿ ಕೊಡುವುದರಲ್ಲಿ ಕೈಮಗ್ಗಗಳನ್ನು ಕೊಡುವಿರೋ ಅಥವಾ ಪವರ್ ಲೂಮ್ಸ್ ಕೊಡುವಿರೋ ?

ಶ್ರೀ ಸಿ. ಎಂ. ಪೂಣಚ್ಚ.—ಅದು ಇಲಾಖೆಯವರ ಪರಿಶೀಲನೆಯಲ್ಲಿ ಇದೆ. ಇನ್ನೂ ಸರಕಾರಕ್ಕೆ ಶಿಫಾರಸುಗಳು ಬಂದಿಲ್ಲ.

ಶ್ರೀ ಎಂ. ಲಿಂಗೇಗೌಡ.—ಎರಡು ವರ್ಷಗಳ ಹಿಂದೆ ಪವರ್ ಲೂಂ ಹಾಕುವುದಕ್ಕೆ ಒಂದು ಲಕ್ಷ ರೂಪಾಯಿಗಳ ಅಂದಾಜು ಮಾಡಿದ್ದು ತಮ್ಮ ರಿಕಾರ್ಡುಗಳಲ್ಲಿ ಇದೆಯೋ ?

ಶ್ರೀ ಸಿ. ಎಂ. ಪೂಣಚ್ಚ.—ನನ್ನ ಹತ್ತಿರವಿರುವ ರಿಕಾರ್ಡುಗಳಲ್ಲಿ ಈ ದಾಖಲೆ ಇಲ್ಲ.

Representation for release of land under Hebbanagatta Kavalu.

Q.—689. Sri A. R. KARISIDDAPPA (Arsikere).—

Will the Government be pleased to state :—

(*a*) whether they have not received any representation requesting them to release land under the Hebbanagatta Kavalu near Arsikere for cultivation purposes ;

(*b*) the action taken by them on that representation ?